# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 569 |
| ಉತ್ತರಿಸುವ ಸಚಿವರು | : | ಮಾನ್ಯ ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು |
| ಉತ್ತರಿಸಬೇಕಾದ ದಿನಾಂಕ | : | 11.12.2020 |

| ಕ್ರಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ಕೋವಿಡ್-19ರ ಹಿನ್ನೆಲೆಯಲ್ಲಿ ಲಾಕ್ ಡೌನ್ ವಿಧಿಸಿದ ಪ್ರಯುಕ್ತ ಸಂಕಷ್ಟ ದಲ್ಲಿರುವ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆ ಗಳನ್ನು ನಡೆಸುವ ನೇಕಾರರಿಗೆ "ನೇಕಾರರ ಸಮ್ಮಾನ್" ಯೋಜನೆಯಡಿ ವಾರ್ಷಿಕ ರೂ.2,000/- ಹಣ ನೀಡುವುದಾಗಿ ಘೋಷಿಸಿದ್ದು, ಫಲಾನುಭವಿಗಳ ಖಾತೆಗೆ ಹಣ ಜಮೆ ಆಗಿದೆಯೇ; | ಕೋವಿಡ್-19 ಹಿನ್ನೆಲೆಯಲ್ಲಿ ಲಾಕ್ ಡೌನ್ ವಿಧಿಸಿರುವ ಪ್ರಯುಕ್ತ ಸಂಕಷ್ಟದಲ್ಲಿರುವ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ನೇಕಾರರಿಗೆ "ನೇಕಾರ ಸಮ್ಮಾನ್" ಯೋಜನೆಯಡಿ ವಾರ್ಷಿಕ ರೂ.2,000/-ಗಳ ಪರಿಹಾರಧನ ನೀಡುವುದಾಗಿ ಘೋಷಿಸಿದ್ದು, ಸದರಿ ಯೋಜನೆಯಡಿ ರಾಜ್ಯದಲ್ಲಿ ಈವರೆವಿಗೆ 50,511 ಕೈಮಗ್ಗ ನೇಕಾರರ ಅರ್ಜಿಗಳನ್ನು ಸೇವಾ ಸಿಂಧು ತಂತ್ರಾಂಶದಲ್ಲಿ ನೋಂದಾಯಿಸಿದ್ದು, ಇದರಲ್ಲಿ 46,259 ಕೈಮಗ್ಗ ನೇಕಾರ ಫಲಾನುಭವಿಗಳಿಗೆ ನೇರ ನಗದು ವರ್ಗಾವಣೆ (ಡಿ.ಬಿ.ಟಿ) ಮುಖಾಂತರ ಹಣ ಜಮೆ ಮಾಡಲಾಗಿದೆ. |
| (ಆ) | ಬೆಳಗಾವಿ ಜಿಲ್ಲೆಯಲ್ಲಿ ಒಟ್ಟು ಇರುವ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆ ಗಳನ್ನು ನಡೆಸುವ ನೇಕಾರರ ಸಂಖ್ಯೆ ಎಷ್ಟು; | 4ನೇ ಕೈಮಗ್ಗ ಗಣತಿಯ ಪ್ರಕಾರ ಬೆಳಗಾವಿ ಜಿಲ್ಲೆಯಲ್ಲಿ ಕೈಮಗ್ಗ ನೇಕಾರಿಕೆ ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳಲ್ಲಿ 5,353 ನೇಕಾರರು ತೊಡಗಿದ್ದು, ಇದರಲ್ಲಿ ಕೈಮಗ್ಗ ನೇಕಾರಿಕೆ ನಡೆಸುವ ನೇಕಾರರ ಸಂಖ್ಯೆ:1,751 ಹಾಗೂ ಇತರೆ ಕೈಮಗ್ಗ ಚಟುವಟಿಕೆಗಳನ್ನು ನಡೆಸುವ ನೇಕಾರರ ಸಂಖ್ಯೆ:3,602 ಆಗಿರುತ್ತದೆ. |
| (ಇ) | ಪರಿಹಾರದ ಮೊತ್ತ ಇನ್ನೂ ತಲುಪಿಲ್ಲವೆಂಬ ಕೂಗು ಕೇಳಿಬರುತ್ತಿರು ವುದು ನಿಜವೇ; ಹಾಗಿದ್ದಲ್ಲಿ, ಇದನ್ನು ಪರಿಹರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | "ನೇಕಾರ ಸಮ್ಮಾನ್" ಯೋಜನೆಯಡಿ ಬೆಳಗಾವಿ ಜಿಲ್ಲೆಯಲ್ಲಿ 5,293 ನೇಕಾರರನ್ನು ಪರಿಹಾರಧನಕ್ಕಾಗಿ ನೋಂದಾಯಿಸಲಾಗಿದ್ದು, ಅದರಲ್ಲಿ ಈವರೆವಿಗೆ 4,382 ನೇಕಾರರಿಗೆ ಡಿ.ಬಿ.ಟಿ ಮೂಲಕ ಸಹಾಯಧನ ನೀಡಲಾಗಿರುತ್ತದೆ.<br><br>ಇನ್ನುಳಿದ 911 ನೇಕಾರರ ಆಧಾರ ಸಂಖ್ಯೆಯೊಂದಿಗೆ ಬ್ಯಾಂಕ್ ಖಾತೆಯು ಎನ್.ಪಿ.ಸಿ.ಐ.ಗೆ ಜೋಡಣೆಯ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಈ ಪ್ರಕ್ರಿಯೆ ಮುಗಿದ ತಕ್ಷಣ ಅರ್ಹ ನೇಕಾರರಿಗೆ ಯೋಜನೆಯ ಪರಿಹಾರಧನ ಜಮೆ ಆಗಲಿದೆ. |

ಸಂ: ವಾಕೈ 259 JAKE 2020

(ಶ್ರೀಮಂತ ಬಾಳಾಸಾಹೇಬ ಪಾಟೀಲ್)
ಕೈಮಗ್ಗ ಮತ್ತು ಜವಳಿ ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಸಚಿವರು